# ಕಮಲ್ ಹೊಸ ರೂಪ!

ದಕ್ಷಿಣದ ಪ್ರತಿಭಾವಂತ ನಟ ಕಮಲಹಾಸನ್ ಹೊಸ ಚಿತ್ರ 'ವಿಶ್ವರೂಪಂ' (ಹಿಂದಿಯಲ್ಲಿ– ವಿಶ್ವರೂಪ್) ಸಿನಿ ಪ್ರೇಕ್ಷಕರಲ್ಲಿ ತೀವ್ರ ಕುತೂಹಲ ಕೆರಳಿಸಿದೆ. ಜನವರಿ 11ರಂದು ಪೊಂಗಲ್ ಹಬ್ಬಕ್ಕೆ ಪೂರ್ವಭಾವಿಯಾಗಿ ಬಿಡುಗಡೆಯಾಗಲಿರುವ 'ವಿಶ್ವರೂಪಂ' ಚಿತ್ರದ ಕಥೆ ಭಯೋತ್ಪಾದನೆಗೆ ಸಂಬಂಧಿಸಿದ್ದು. ರಾಹುಲ್ ಬೋಸ್, ಶೇಖರ್ ಕಪೂರ್, ಆಂಡ್ರೀ ಜರ್ಮಿಯಾ ಮುಂತಾದ ದೊಡ್ಡ ತಾರಾಗಣವೇ ಇರುವ ಈ ಚಿತ್ರದಲ್ಲಿ ಭಯೋತ್ಪಾದನೆಯ ಜತೆಗೆ ಒಂದು ಧರ್ಮವನ್ನು ಸಮೀಕರಿಸಿದ ದೃಶ್ಯಗಳಿವೆ ಎಂಬ ಗಾಳಿಮಾತುಗಳು ಹರಡಿದ್ದು, ಪ್ರತಿಭಟನೆಯ ಸ್ವರಗಳೂ ಕೇಳಿಸತೊಡಗಿವೆ. ಹೀಗಾಗಿ ಚಿತ್ರದ ಬಗ್ಗೆ ಕುತೂಹಲ ಇನ್ನಷ್ಟು ಹೆಚ್ಚಿದೆ.

ಆದರೆ ಅದಕ್ಕಿಂತ ಹೆಚ್ಚಾಗಿ, ಚಿತ್ರವನ್ನು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡುವುದಕ್ಕೆ 8 ಗಂಟೆ ಮುಂಚಿತವಾಗಿ ಡಿಟಿಎಚ್ ಮೂಲಕ ಮನೆ ಮನೆಗೆ ಬಿಡುಗಡೆ ಮಾಡುವ ಕಮಲಹಾಸನ್ ನಿರ್ಧಾರ ಥಿಯೇಟರ್ ಮಾಲೀಕರಿಗೆ ಸಿಟ್ಟು ತರಿಸಿದೆ. ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವಂತೆ ಈಗಾಗಲೆ ಮುಖ್ಯಮಂತ್ರಿ ಜಯಲಲಿತಾ ಅವರನ್ನು ವಿತರಕರು ಕೋರಿರುವ ಸುದ್ದಿ ಬಂದಿದೆ. ಕಮಲಹಾಸನ್ ಆಪ್ತರ ಪ್ರಕಾರ, "ಡಿಟಿಎಚ್‌ನಲ್ಲಿ ಕೇವಲ ಒಂದು ಷೋ ಮಾತ್ರ ಇರಲಿದೆ. ಯಾರೇ ಇದನ್ನು ಡಿಟಿಎಚ್ ಮೂಲಕ ನೋಡಿದರೂ 1000 ರೂಪಾಯಿ ಶುಲ್ಕ ವಿಧಿಸಲಾಗುವುದು. ತಮಿಳುನಾಡಿನಲ್ಲಿ ಒಟ್ಟಾರೆ ಶೇಕಡಾ 3ರಷ್ಟು ಜನ ಮಾತ್ರ ಡಿಟಿಎಚ್ ಹೊಂದಿ-ರುವುದರಿಂದ ಥಿಯೇಟರ್‌ಗಳವರಿಗೆ ತೊಂದರೆ ಇಲ್ಲ.."

ಮಲೇಷ್ಯಾ, ಸಿಂಗಾಪುರ, ಯೂರೋಪ್‌ಗಳಲ್ಲೂ ಚಿತ್ರವನ್ನು ಡಿಟಿಎಚ್ ಮೂಲಕ ತೋರಿಸಲು ಈಗಾಗಲೆ ಮಾತುಕತೆ ನಡೆದಿದೆಯಂತೆ. ಒಟ್ಟಾರೆ ಚಿತ್ರವೊಂದರ ಮಾರುಕಟ್ಟೆ ಆದಾಯ ಹೆಚ್ಚಿಸಲು ಆಧುನಿಕ ತಂತ್ರಜ್ಞಾನದ ನೆರವು ಪಡೆಯುವ ಕಮಲ್ ಸಾಹಸ ವೀಕ್ಷಕರ ಮೆಚ್ಚುಗೆ ಗಳಿಸಿರುವುದಂತೂ ನಿಜ. ಈ ವಿವಾದದಿಂದಾಗಿ ಥಿಯೇಟರಿಗೂ ಜನ ಮುಗಿಬೀಳಬಹುದು.



■ ಬಿಂದು




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65